# ಅಧಿಕಾರಿ ವೇತನ ಸಮಿತಿ – 2011

## ಪ್ರಶ್ನಾವಳಿ

**(ವಿನಂತಿ: ಪ್ರಶ್ನಾವಳಿಯ ಎಲ್ಲ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ/ಸಲಹೆ ನೀಡುವುದು)**

**1.** (ಅ) ಸಾಮಾನ್ಯವಾಗಿ ವೇತನ ರಚನೆ ಈ ಕೆಳಕಂಡ ಮೂಲ ಅಂಶಗಳನ್ನು ಒಳಗೊಂಡಿರುತ್ತದೆ:

1) ಕನಿಷ್ಠ ವೇತನ
2) ಗರಿಷ್ಠ ವೇತನ
3) ಕನಿಷ್ಠ ಹಾಗೂ ಗರಿಷ್ಠ ವೇತನಗಳ ಮಧ್ಯದ ಅನುಪಾತ
4) ವೇತನ ಶ್ರೇಣಿಗಳ ಸಂಖ್ಯೆ
5) ವೇತನ ಶ್ರೇಣಿಯ ಹಂತ
6) ವೇತನ ಶ್ರೇಣಿಗಳ ಮಧ್ಯ ಇರುವ ಸಂಬಂಧಗಳು
7) ವೇತನ ಬಡ್ತಿಯ ದರಗಳು
8) ಬೆಲೆ ಸೂಚ್ಯಂಕ/ಹಣದುಬ್ಬರ
9) ಜೀವನ ನಿರ್ವಹಣೆ (cost of living) ವೆಚ್ಚ

ಈ ಮೇಲಿನ ಅಂಶಗಳನ್ನಲ್ಲದೆ ಇನ್ನೂ ಇತರೆ ಯಾವ ಅಂಶಗಳನ್ನು ಪರಿಗಣಿಸುವುದು ಅವಶ್ಯಕವೆಂದು ತಾವು ಭಾವಿಸುತ್ತಿರಾ? ಹಾಗಿದ್ದಲ್ಲಿ, ಕಾರಣಸಹಿತ ವಿವರಿಸುವುದು.

(ಆ) ಪ್ರಸ್ತುತ ವೇತನ ಶ್ರೇಣಿಗಳನ್ನು ಅನುಬಂಧ **ಅ** ನಲ್ಲಿ ಪಟ್ಟಿ ಮಾಡಲಾಗಿದೆ. ಈ ಶ್ರೇಣಿಗಳನ್ನು ದಿನಾಂಕ: 01.07.2005 ರಂದು ಪಡೆಯುತ್ತಿದ್ದ ತುಟ್ಟಿಭತ್ಯೆ ವಿಲೀನಗೊಳಿಸಿ, ಬಂದ ಹನ್ನೆರಡು ತಿಂಗಳ ಸರಾಸರಿ ಬಳಕೆದಾರರ ಬೆಲೆ ಸೂಚ್ಯಾಂಕ **524**ರ ಬಿಂದುವಿಗೆ ರೂಪಿಸಲಾಗಿದೆ. (ಎಐಎಸಿಪಿಐ ಆಧಾರ 1982=100) ಈ ಶ್ರೇಣಿಗಳು 01.07.2005 ರಿಂದ ಜಾರಿಯಲ್ಲಿವೆ.

(ಇ) ಕಾಲಕಾಲಕ್ಕೆ ವೇತನ ಶ್ರೇಣಿಗಳನ್ನು ಸರಳೀಕರಣಗೊಳಿಸಿರುವುದರಿಂದಾಗಿ ಅವುಗಳ ಸಂಖ್ಯೆಯು ಪ್ರಸ್ತುತ 25 ಕ್ಕೆ ಸೀಮಿತವಾಗಿದೆ. ಈ ವೇತನ ಶ್ರೇಣಿಗಳು ಸಂಖ್ಯೆಯಲ್ಲಿ ಹೆಚ್ಚಾಗಿವೆ ಎಂದು ತಾವು ಭಾವಿಸುವಿರಾ? ಹಾಗಿದ್ದಲ್ಲಿ ಯಾವ ಬದಲಾವಣೆ ತಾವು ಬಯಸುವಿರಿ, ವಿವರಿಸುವುದು.

(ಈ) ಪ್ರಸಕ್ತ ದಿನಾಂಕ:01.07.2005 ರಿಂದ ಜಾರಿಯಲ್ಲಿರುವ ವೇತನ ಸ್ವರೂಪ ಮತ್ತು ರಚನೆಯಲ್ಲಿ ತಾವು ಬದಲಾವಣೆ ಅಥವಾ ಸರಳೀಕರಣದ ಅವಶ್ಯಕತೆ ಇದೆ ಎಂದು ಭಾವಿಸುವಿರಾ? ಹಾಗಿದ್ದಲ್ಲಿ, ಅದನ್ನು ಯಾವ ರೀತಿಯಲ್ಲಿ ಮಾಡಬಹುದಾಗಿದೆ ಎಂಬುದರ ಕುರಿತು ತಮ್ಮ ಸಲಹೆಯನ್ನು ನೀಡುವುದು.

**2.** ಯಾವ ಬೆಲೆ ಸೂಚ್ಯಾಂಕದ ಮಟ್ಟಕ್ಕೆ ಪರಿಷ್ಕೃತ ವೇತನ ರಚನೆಯನ್ನು ರೂಪಿಸುವುದು ಸೂಕ್ತ? ಕಾರಣಗಳೊಂದಿಗೆ ವಿವರಿಸಿ. ದಿನಾಂಕ:01.06.2011 ರಂದು ಹನ್ನೆರಡು ತಿಂಗಳ ಸರಾಸರಿ ಬಳಕೆದಾರರ ಬೆಲೆ ಸೂಚ್ಯಾಂಕ **182** (ಆಧಾರ 2001=100) ರಷ್ಟಿದೆ.

**3.** ಸರ್ಕಾರಿ ನೌಕರರ ಕನಿಷ್ಠ ಹಾಗೂ ಗರಿಷ್ಠ ವೇತನ (ಮೂಲ ವೇತನ ಮತ್ತು ತುಟ್ಟಿಭತ್ಯೆ) ದಿನಾಂಕ:01.01.2011 ರಂದು ಅನುಕ್ರಮವಾಗಿ ರೂ. **7800** ಮತ್ತು ರೂ. **64838** ಇರುತ್ತದೆ. ಪ್ರಸ್ತುತ ಜೀವನ ನಿರ್ವಹಣಾ ವೆಚ್ಚ, ರಾಜ್ಯದ ಆರ್ಥಿಕ ಸ್ಥಿತಿ, ತಲಾ ಆದಾಯ (per capita income), ರಾಜ್ಯದ ಆರ್ಥಿಕ ಸಂಪನ್ಮೂಲ ಹಾಗೂ 12ನೇ ಪಂಚವಾರ್ಷಿಕ ಯೋಜನೆಯ ಹಾಗೂ ಸಾಮಾಜಿಕ ಸೇವಾ ವೆಚ್ಚಗಳ ಬದ್ಧತೆಯನ್ನು ಪರಿಗಣಿಸಿ, ಕನಿಷ್ಠ ಮತ್ತು ಗರಿಷ್ಠ ವೇತನ ಯಾವ ಪ್ರಮಾಣದಲ್ಲಿರಬೇಕು? ಯಾವ ತತ್ವದ ಆಧಾರದ ಮೇಲೆ ಈ ಕನಿಷ್ಠ ಮತ್ತು ಗರಿಷ್ಠ ಮೊತ್ತವನ್ನು ನಿರ್ಧರಿಸಲು ನೀವು ಸೂಚಿಸಬಯಸುವಿರಿ.

**4.** ಪ್ರಸ್ತುತ ಕನಿಷ್ಠ ಮತ್ತು ಗರಿಷ್ಠ ಮೂಲ ವೇತನಗಳ ಅನುಪಾತ 1:8.31 ರಷ್ಟು ಇದ್ದು, ಇದು ಸಮರ್ಪಕವಾಗಿದೆಯೇ? ಇಲ್ಲದಿದ್ದಲ್ಲಿ, ನಿಮ್ಮ ಅನಿಸಿಕೆಯಲ್ಲಿ ಸಮರ್ಪಕ ಅನುಪಾತ ಎಷ್ಟಿರಬೇಕು? ಕಾರಣದೊಂದಿಗೆ ವಿವರಿಸುವುದು.

**5.** ಈಗಿರುವ ವೇತನ ಬಡ್ತಿಯ (increment) ದರ ಹಾಗೂ ಹಂತಗಳು ಸಮರ್ಪಕವಾಗಿವೆಯೇ?

**6.** ರಾಜ್ಯ ಸರ್ಕಾರವು ಮಾಸ್ಟರ್ ವೇತನ ಶ್ರೇಣಿಯನ್ನು ದಿನಾಂಕ:01.07.1986 ರಿಂದ ಅಳವಡಿಸಿಕೊಂಡು ಮುಂದುವರೆಸುತ್ತಾ ಬಂದಿರುತ್ತದೆ. ಇದರಲ್ಲಿ ಯಾವ ತರಹದ ಬದಲಾವಣೆಯನ್ನು ತಾವು ಬಯಸುತ್ತೀರಾ? ಹಾಗಿದ್ದಲ್ಲಿ, ಕಾರಣ ಸಹಿತ ವಿವರಿಸುವುದು.

**7.** ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿಗೊಳಿಸುವಾಗ ನಿರ್ದಿಷ್ಟ ಪ್ರಮಾಣದಲ್ಲಿ fitment benefit ಅನ್ನು ಮೂಲ ವೇತನದನ್ವಯ ಶೇಕಡಾವಾರು ನೀಡಲಾಗುತ್ತಿದೆ. ಈ ವ್ಯವಸ್ಥೆಯನ್ನು ಮುಂದುವರೆಸುವುದು ಅವಶ್ಯಕವೆ ಅಥವಾ ಇದರಲ್ಲಿ ಯಾವುದಾದರು ಬದಲಾವಣೆಯನ್ನು ತಾವು ಬಯಸುತ್ತೀರಾ? ಹೌದಾದಲ್ಲಿ, ಕಾರಣ ಸಹಿತ ವಿವರಿಸುವುದು.

**8.** ಹಾಲಿ ಜಾರಿಯಲ್ಲಿರುವ ಐದು ವಾರ್ಷಿಕ ಸ್ಥಗಿತ ವೇತನ ಬಡ್ತಿಗಳ ಮಂಜೂರಾತಿ ಪದ್ಧತಿಯ ಬಗ್ಗೆ ತಮ್ಮ ಅಭಿಪ್ರಾಯವೇನು, ಈ ವ್ಯವಸ್ಥೆಯಲ್ಲಿ ಯಾವುದಾದರು ಬದಲಾವಣೆಯನ್ನು ತಾವು ಬಯಸುತ್ತೀರಾ? ಹಾಗಿದ್ದಲ್ಲಿ, ಕಾರಣ ಸಹಿತ ವಿವರಿಸುವುದು.

**9.** ಸಮಿತಿಯು ರಾಜ್ಯ ಸರ್ಕಾರವು ಅಳವಡಿಸಿಕೊಂಡಿರುವ ಪ್ರಸಕ್ತ ಕೇಂದ್ರ ಸರ್ಕಾರದ ತುಟ್ಟಿಭತ್ಯೆಯ ನೀತಿಗೆ ಸಂಬಂಧಿಸಿದಂತೆ ತುಟ್ಟಿಭತ್ಯೆಯ ಸೂತ್ರವನ್ನು ಪರಿಶೀಲಿಸಿ ಮತ್ತು ನಿರ್ಣಯಿಸಿ ಕಾರ್ಯಸಾಧ್ಯವಿರುವ ಬದಲಾವಣೆಗಳನ್ನು ಮಾಡಲು ಸಲಹೆ ನೀಡಬೇಕಾಗಿದೆ. ಈ ಸೂತ್ರವನ್ನು ಮುಂದುವರೆಸಬೇಕೇ? ಅಥವಾ ಪ್ರಸ್ತುತ ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿ ಯಾವುದಾದರು ಬದಲಾವಣೆ ಅಗತ್ಯವಿದೆಯೇ? ಬದಲಾವಣೆ ಅಗತ್ಯವಿದೆಯೆಂದು ನೀವು ಭಾವಿಸಿದರೆ, ಆ ಬದಲಾವಣೆ ಕುರಿತು ವಿವರಿಸುವುದು.

**10.** ಪ್ರಸ್ತುತ ಜಾರಿಯಲ್ಲಿರುವ ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳ ದರಗಳು ಹಾಗೂ ನಗರ ಮತ್ತು ಪಟ್ಟಣಗಳ ವರ್ಗೀಕರಣ ಅನುಬಂಧ **ಆ** ರಲ್ಲಿ ತಿಳಿಸಲಾಗಿದೆ. ಈ ದರಗಳು ಮತ್ತು ವರ್ಗೀಕರಣ ಸಮರ್ಪಕವಾಗಿದೆಯೇ?

**11**. (ಅ) ಪ್ರಸ್ತುತ ಕೆಲವೊಂದು ಹುದ್ದೆಗಳಿಗೆ ನೀಡಲಾಗುತ್ತಿರುವ ವಿಶೇಷ ಭತ್ಯೆಯ ಸಂದಾಯದ ಅಗತ್ಯತೆ ಇದೆಯೇ? ವಿವರಿಸುವುದು.

(ಆ) ಪ್ರಸ್ತುತ ಜಾರಿಯಲ್ಲಿರುವ ಈ ಕೆಳಕಂಡ ಭತ್ಯೆಗಳ ದರಗಳಲ್ಲಿ ಹಾಗೂ ಸೌಲಭ್ಯಗಳಲ್ಲಿ ಯಾವುದಾದರು ಬದಲಾವಣೆಯ ಅವಶ್ಯಕತೆ ಇದೆಯೇ? ಹೌದಾದಲ್ಲಿ ಕಾರಣ ಸಹಿತ ವಿವರಿಸುವುದು.

(1) ಪ್ರಭಾರ ಭತ್ಯೆ
(2) ವೈದ್ಯಕೀಯ ಭತ್ಯೆ
(3) ಸಮವಸ್ತ್ರ ಭತ್ಯೆ
(4) ಬಟ್ಟೆ ಒಗೆಸಲು ಭತ್ಯೆ
(5) ಗಿರಿ ಭತ್ಯೆ
(6) ಅಪಾಯ ಭತ್ಯೆ
(7) ಪ್ರಯಾಣ ಭತ್ಯೆ
(8) ನಿಗದಿತ ಪ್ರಯಾಣ ಭತ್ಯೆ
(9) ದಿನ ಭತ್ಯೆ
(10) ಅಂಧ ಮತ್ತು ಚಲನವಲನ ವೈಕಲ್ಯ ಹೊಂದಿದ ನೌಕರರಿಗೆ ವಾಹನ ಭತ್ಯೆ.
(11) ರಜಾ ಪ್ರಯಾಣ ಸೌಲಭ್ಯ
(12) ಹೊರ ರಾಜ್ಯ ಭತ್ಯೆ
(13) ಹಬ್ಬದ ಮುಂಗಡ,
ಇತ್ಯಾದಿ . . . .

**12**. ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು ಹಾಗೂ ತತ್ಸಂಬಂಧ ಹೊರಡಿಸಿದ ಆದೇಶಗಳಲ್ಲಿ ಯಾವುದಾದರು ಬದಲಾವಣೆಯ ಅವಶ್ಯಕತೆ ಇದೆಯೇ?

**13**. ಕಳೆದ ಹಲವು ವರ್ಷಗಳಿಂದ ಗೃಹ ನಿರ್ಮಾಣ/ಗೃಹ ಖರೀದಿ/ಮೋಟಾರು ವಾಹನ/ಕಂಪ್ಯೂಟರ್‌ಗಳ ಖರೀದಿಗಾಗಿ ಮುಂಗಡ ಮಂಜೂರಾತಿ ಕುರಿತು ಯಾವುದೇ ಬೇಡಿಕೆ ಇಲ್ಲದಿರುವುದರಿಂದ ಈ ಸೌಲಭ್ಯ ನಿಲ್ಲಿಸುವ ಬಗ್ಗೆ ತಮ್ಮ ಅಭಿಪ್ರಾಯ ನೀಡುವುದು.

**14. ನಿವೃತ್ತಿ ಸೌಲಭ್ಯಗಳು**

ಪ್ರಸ್ತುತ ಲಭ್ಯವಿರುವ ಮರಣ ಹಾಗೂ ನಿವೃತ್ತಿ ಸೌಲಭ್ಯಗಳಾದ ನಿವೃತ್ತಿ ವೇತನ, ಕುಟುಂಬ ನಿವೃತ್ತಿ ವೇತನ, ಮರಣ ಹಾಗೂ ನಿವೃತ್ತಿ ಉಪದಾನ ಮತ್ತು ನಿವೃತ್ತಿ ವೇತನದ ಪರಿವರ್ತನೆ ಇವುಗಳ ಪ್ರಮಾಣ ಸಮರ್ಪಕವಾಗಿದೆಯೆಂದು ತಾವು ಭಾವಿಸುವಿರಾ? ಇಲ್ಲದಿದ್ದಲ್ಲಿ, ತಮ್ಮ ಅಭಿಪ್ರಾಯದಲ್ಲಿ ಇದರಲ್ಲಿ ಯಾವ ಬದಲಾವಣೆ/ ಪರಿಷ್ಕರಣೆ ಅವಶ್ಯಕವಿದೆಯೆಂದು ಕಾರಣಗಳೊಂದಿಗೆ ವಿವರಿಸುವುದು.

**15. ನಿವೃತ್ತಿ ವೇತನದಾರರು**

1. ನಿವೃತ್ತಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ವಿಷಯಗಳ ಬಗ್ಗೆ ನಿಮ್ಮ ವಿಚಾರಪೂರಿತ ಅಭಿಪ್ರಾಯವೇನು?
   ಅ. ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನ.
   ಆ. ನಿವೃತ್ತಿ/ಕುಟುಂಬ ನಿವೃತ್ತಿ ವೇತನದ ಕನಿಷ್ಠ ಮತ್ತು ಗರಿಷ್ಠ ಪ್ರಮಾಣ.
   ಇ. ನಿವೃತ್ತಿ ವೇತನವು ಆದಷ್ಟು ಬೇಗನೇ ಇತ್ಯರ್ಥವಾಗುವಂತೆ ನೋಡಿಕೊಳ್ಳಲು ನಿವೃತ್ತಿ ವೇತನ ಕುರಿತ ನಿಯಮಗಳನ್ನು ಇನ್ನಷ್ಟು ಸರಳುಗೊಳಿಸಲು ನಿಮ್ಮ ಸಲಹೆ ಏನು?

**16.** ಸರ್ಕಾರಿ ನೌಕರರಿಗೆ ಅನ್ವಯಿಸುವ ಪ್ರಸಕ್ತ ಸಮೂಹ ವಿಮಾ ಯೋಜನೆಯನ್ನು ಇನ್ನಷ್ಟು ಸುಧಾರಣೆ ಮಾಡಲು ನಿಮ್ಮ ಸಲಹೆಗಳೇನಾದರೂ ಇದೆಯೇ?

**17. ಮಹಿಳಾ ಉದ್ಯೋಗಿಗಳು**

ಸರ್ಕಾರಿ ಮಹಿಳಾ ಉದ್ಯೋಗಿಗಳಿಗೆ ಪ್ರಸಕ್ತ ಲಭ್ಯವಿರುವ ಪ್ರಯೋಜನಗಳು ಮತ್ತು ಸೌಲಭ್ಯಗಳಲ್ಲಿ ಯಾವುದೇ ಬದಲಾವಣೆ ಅಥವಾ ಇನ್ನೂ ಹೆಚ್ಚಿನ ಸೌಲಭ್ಯದ ಅಗತ್ಯವಿದೆ ಎಂದು ತಾವು ಭಾವಿಸುವಿರಾ? ಭಾವಿಸಿದಲ್ಲಿ, ಕಾರಣಗಳೊಂದಿಗೆ ವಿವರಿಸುವುದು.

**ಆರ್ಥಿಕ ಬಾಧ್ಯತೆ ಮತ್ತು ಸಾಮಾಜಿಕ ಜವಾಬ್ದಾರಿ ಬಗ್ಗೆ ಗಮನಿಸಿ ಉತ್ತರಿಸಬೇಕಾದ ಪ್ರಮುಖ ಅಂಶಗಳು**

**18.** (ಅ) ರಾಜ್ಯದ ಅಭಿವೃದ್ಧಿಯ ಪಥವನ್ನು ಸಮಂಜಸ ವೇಗದಲ್ಲಿಯೇ ನಿರ್ವಹಿಸುವ ಅವಶ್ಯಕತೆ ಹಾಗೂ ಸಮಾಜದ ಎಲ್ಲಾ ವರ್ಗಗಳ ಅನುಕೂಲಕ್ಕಾಗಿ ಸಾಮಾಜಿಕ ಸೇವೆಯನ್ನು ಒದಗಿಸುವುದನ್ನು ಗಮನದಲ್ಲಿರಿಸಿ, ತನ್ನ ಒಟ್ಟು ವೆಚ್ಚದ ಶೇಕಡಾ ಎಷ್ಟು ಭಾಗವನ್ನು ಸರ್ಕಾರಿ ನೌಕರರ ಸಂಬಳಕ್ಕಾಗಿ ತೆಗೆದಿರಿಸಬಹುದು? ದಯವಿಟ್ಟು ಕಾರಣಗಳನ್ನು ನೀಡಿ.

(ಆ) ಯೋಜನೇತರ ವೆಚ್ಚದಲ್ಲಿ ಕಡಿತಗೊಳಿಸಲು ಅವಕಾಶವಿದೆ ಎಂದು ಭಾವಿಸುವಿರಾ?

(ಇ) ಇತರೆ ಯಾವ ಮೂಲದಿಂದ ವೇತನ ಪರಿಷ್ಕರಣೆಯಿಂದ ಆಗುವ ಹೆಚ್ಚುವರಿ ವೆಚ್ಚವನ್ನು ಭರಿಸಲು ಸಾಧ್ಯವಿದೆ ಎಂದು ಸೂಚಿಸುವುದು.

(ಈ) ಹೆಚ್ಚುವರಿ ವೆಚ್ಚವನ್ನು ತೆರಿಗೆ ಅಥವಾ ಇತರ ಮೂಲಗಳಿಂದ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸಾಧ್ಯತೆ ಕುರಿತು ಉತ್ತರಿಸುವುದು.

(ಉ) ಇನ್ನಿತರ ಗಮನಾರ್ಹ ಮಿತವ್ಯಯ ಮಾರ್ಗೋಪಾಯ ಸೂಚಿಸುವುದು.

**19.** (ಅ) ಗಣಕೀಕರಣ ಹಾಗೂ ಕಾರ್ಯ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆಯಿಂದಾದ ಸುಧಾರಣೆಯ ಹಿನ್ನೆಲೆಯಲ್ಲಿ ಸರ್ಕಾರಿ ಇಲಾಖೆಗಳಲ್ಲಿನ ಕಾರ್ಯಕ್ಷಮತೆ ಮತ್ತು ಯೋಜನೆಗಳ ಅನುಷ್ಠಾನಗಳಿಗೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಬೀರದಂತೆ ವಿವಿಧ ಹಂತದ ಹುದ್ದೆಗಳಲ್ಲಿನ ಹಾಲಿ ಇರುವ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಲು ಸಾಧ್ಯವಿದೆಯೇ?

(ಆ) ಸರ್ಕಾರಿ ನೌಕರರಲ್ಲಿ ಸಮಯ ಪಾಲನೆ ಹಾಗೂ ಕಾರ್ಯಕ್ಷಮತೆಯನ್ನು ಹೇಗೆ ಉತ್ತಮಪಡಿಸಬಹುದು?

(ಇ) ಸರ್ಕಾರಿ ಕಛೇರಿಗಳು ವಾರದಲ್ಲಿ ಎಷ್ಟು ದಿನ ಕಾರ್ಯನಿರ್ವಹಣೆ ಮಾಡುವುದು ಉಚಿತ ಹಾಗೂ ಅದರಂತೆ ಪ್ರತಿದಿನ ಎಷ್ಟು ಗಂಟೆ ಕಛೇರಿ ತನ್ನ ಕಾರ್ಯವನ್ನು ನಿರ್ವಹಿಸಬೇಕು? ಇವುಗಳ ಕುರಿತು ತಮ್ಮ ಅಭಿಪ್ರಾಯ ನೀಡುವುದು.

(ಈ) ಗುಲಬರ್ಗಾ ಹಾಗೂ ಇತರೆ ಜಿಲ್ಲೆಗಳಲ್ಲಿ ಬೇಸಿಗೆ ಕಾಲದಲ್ಲಿನ ಕಛೇರಿ ವೇಳೆಯನ್ನು ಮಾರ್ಪಾಡು ಮಾಡುವ ಅವಶ್ಯಕತೆ ಇದೆಯೇ?

**20. ಸ್ಥಳೀಯ ಸಂಸ್ಥೆಗಳು**

**ಸ್ಥಳಿಯ ಸಂಸ್ಥೆಯ ಹೆಸರು:**

1. ನಿಮ್ಮ ಸಂಸ್ಥೆಯಲ್ಲಿ ವಿವಿಧ ಹಂತಗಳಲ್ಲಿರುವ ಹುದ್ದೆಗಳು ಮತ್ತು ಅವುಗಳಿಗೆ ನೀಡಿರುವ ವೇತನ ಶ್ರೇಣಿಗಳ ವಿವರಗಳನ್ನು ಈ ಕೆಳಕಂಡ ನಮೂನೆಯಲ್ಲಿ ನೀಡುವುದು.
2.

| **ಕ್ರಮ ಸಂಖ್ಯೆ** | **ಹುದ್ದೆಗಳ ಹೆಸರು** | **ವೇತನ ಶೇಣಿ** | **ಹುದ್ದೆಗಳ ಸಂಖ್ಯೆ** | **ಸದರಿ ಹುದ್ದೆಗೆ ಸರ್ಕಾರದಲ್ಲಿ ನೀಡಿರುವ ವೇತನ ಶೇಣಿ** |
|---|---|---|---|---|
| 1 | 2 | 3 | 4 | 5 |

3. ಶಾಸನಬದ್ಧವಾದ ಕಡ್ಡಾಯ ಕೆಲಸಕಾರ್ಯಗಳಿಗೆ ಯಾವುದೇ ಭಾದಕವಿಲ್ಲದೆ ಪರಿಷ್ಕರಣೆಯಿಂದ ಉಂಟಾಗುವ ಹೆಚ್ಚಿನ ಹೊರೆಯನ್ನು ಸ್ಥಳೀಯ ಸಂಸ್ಥೆಗಳು ಭರಿಸುವ ಸ್ಥಿತಿಯಲ್ಲಿವೆಯೇ? ಇದ್ದಲ್ಲಿ ವಿವರಗಳನ್ನು ನೀಡಿ.

**21. ಅನುದಾನಿತ ಸಂಸ್ಥೆಗಳು**

**ಸಹಾಯಾನುದಾನ ಪಡೆಯುವ ಸಂಸ್ಥೆಯ ಹೆಸರು:**

1. ನಿಮ್ಮ ಸಂಸ್ಥೆಗೆ ಸಂಬಂಧಪಟ್ಟಂತೆ ಈ ಕೆಳಕಂಡ ನಮೂನೆಯಲ್ಲಿ ಅನುದಾನಿತ ಹುದ್ದೆಗಳ ಪದನಾಮ, ವೇತನ ಶ್ರೇಣಿ ಹಾಗೂ ಹುದ್ದೆಗಳ ಸಂಖ್ಯೆ ಇವುಗಳನ್ನು ಒದಗಿಸುವುದು.

| ಕ್ರಮ ಸಂಖ್ಯೆ | ಹುದ್ದೆಗಳ ಪದನಾಮ (ಬೋಧಕ ಮತ್ತು ಬೋಧಕೇತರ ಎಂದು ಪಟ್ಟಿ ಮಾಡಬೇಕು) | ಪ್ರತಿಯೊಂದು ಪ್ರವರ್ಗ ಹುದ್ದೆಯ ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|
| **1** | **2** | **3** | **4** | **5** |

2. ಸಹಾಯಾನುದಾನ ಪಡೆಯುವ ಸಂಸ್ಥೆಗಳ ಆಡಳಿತ ವರ್ಗಗಳು, ವೇತನ ಶ್ರೇಣಿಯ ಸುಧಾರಣೆ / ಪರಿಷ್ಕರಣೆಯ ಹೆಚ್ಚಿನ ಹೊರೆಯನ್ನು ಹೊರುವ ಸ್ಥಿತಿಯಲ್ಲಿವೆಯೇ? ಇಲ್ಲದಿದ್ದಲ್ಲಿ, ಇದಕ್ಕೆ ಸಂಬಂಧಿಸಿದ ಹೆಚ್ಚಿನ ವೆಚ್ಚವನ್ನು ಹೇಗೆ ಹೊಂದಿಸಲಾಗುತ್ತದೆ?

**22. ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿ**

**ವಿಶ್ವವಿದ್ಯಾನಿಲಯದ ಹೆಸರು:**

1. ವೇತನ ಶ್ರೇಣಿಗಳು: ನಿಮ್ಮ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ನಮೂನೆಯಲ್ಲಿ ಮಾಹಿತಿ ಒದಗಿಸುವದು.

| ಕ್ರಮ ಸಂಖ್ಯೆ | ಹುದ್ದೆಗಳ ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|
| **1** | **2** | **3** | **4** | **5** |

2. ವಿಶ್ವವಿದ್ಯಾನಿಲಯವು ವೇತನ ಪರಿಷ್ಕರಣೆಯ ಹೆಚ್ಚುವರಿ ಹೊರೆಯನ್ನು ಹೊರಲು ಶಕ್ತವಾಗಿದೆಯೇ? ಇಲ್ಲದಿದ್ದರೆ, ಈ ಹೆಚ್ಚುವರಿ ಹೊರೆಯನ್ನು ವಿಶ್ವವಿದ್ಯಾನಿಲಯವು ಹೇಗೆ ಭರಿಸಬಲ್ಲದು?

**23**. ಮೇಲಿನ ಪ್ರಶ್ನಾವಳಿಯಲ್ಲಿ ಸೇರದೆ ಸಮಿತಿಯ ಪರಿಶೀಲನಾಂಶಗಳಲ್ಲಿ ಒಳಪಟ್ಟಿರುವ ಅಂಶಗಳು ಏನಾದರೂ ಇದ್ದಲ್ಲಿ, ಅವುಗಳ ಕುರಿತಂತೆ ನಿಮ್ಮ ಸಲಹೆಗಳನ್ನು ತಿಳಿಸುವುದು.

(ಉತ್ತರಿಸುವವರ ಸಹಿ, ಪದನಾಮ
ಮತ್ತು ವಿಳಾಸ)

## ಅನುಬಂಧ – ಅ

ಮಾಸ್ಟರ್ ಶ್ರೇಣಿ

4800–100–6000–125–6500–150–7100–175–7800–200–8600–225–9500–250–10500–300–12300–350–14400–400–16800–450–19500–525–22650–600–26250–675–30300–750–34800–850–39900

ವೇತನ ಶ್ರೇಣಿಗಳು

ಗ್ರೂಪ್ – ಡಿ

| ಕ್ರಮ ಸಂಖ್ಯೆ | ವೇತನ ಶ್ರೇಣಿ |
|---|---|
| 1 | 4800–100–6000–125–6500–150–7100–175–7275 |

ಗ್ರೂಪ್ – ಸಿ

| | |
|---|---|
| 1 | 5200–100–6000–125–6500–150–7100–175–7800–200–8200 |
| 2 | 5500–100–6000–125–6500–150–7100–175–7800–200–8600–225–9500 |
| 3 | 5800–100–6000–125–6500–150–7100–175–7800–200–8600–225–9500–250–10500 |
| 4 | 6250–125–6500–150–7100–175–7800–200–8600–225–9500–250–10500–300–12000 |
| 5 | 6800–150–7100–175–7800–200–8600–225–9500–250–10500–300–12300–350–13000 |
| 6 | 7275–175–7800–200–8600–225–9500–250–10500–300–12300–350–13350 |
| 7 | 8000–200–8600–225–9500–250–10500–300–12300–350–14400–400–14800 |
| 8 | 8825–225–9500–250–10500–300–12300–350–14400–400–16000 |
| 9 | 9500–250–10500–300–12300–350–14400–400–16800–450–17250 |
| 10 | 10000–250–10500–300–12300–350–14400–400–16800–450–18150 |

ಗ್ರೂಪ್ – ಬಿ

| ಕ್ರಮ ಸಂಖ್ಯೆ | ವೇತನ ಶ್ರೇಣಿ |
|---|---|
| 1 | 10800–300–12300–350–14400–400–16800–450–19500–525–20025 |
| 2 | 11400–300–12300–350–14400–400–16800–450–19500–525–21600 |
| 3 | 12000–300–12300–350–14400–400–16800–450–19500–525–22650 |
| 4 | 13000–350–14400–400–16800–450–19500–525–22650–600–23850 |

ಗ್ರೂಪ್ – ಎ

| ಕ್ರಮ ಸಂಖ್ಯೆ | ವೇತನ ಶ್ರೇಣಿ |
|---|---|
| 1 | 14050–350–14400–400–16800–450–19500–525–22650–600–25050 |
| 2 | 15200–400–16800–450–19500–525–22650–600–25650 |
| 3 | 16400–400–16800–450–19500–525–22650–600–26250 |
| 4 | 18150–450–19500–525–22650–600–26250–675–26925 |
| 5 | 19050–450–19500–525–22650–600–26250–675–27600 |
| 6 | 20025–525–22650–600–26250–675–28275 |
| 7 | 22125–525–22650–600–26250–675–30300 |
| 8 | 24450–600–26250–675–30300–750–31800 |
| 9 | 26250–675–30300–750–34800–850–36500 |
| 10 | 28275–675–30300–750–34800–850–39900 |

# ಅನುಬಂಧ – ಆ

**ನಗರಗಳ ವರ್ಗೀಕರಣ:**

| ಕ್ರಮ ಸಂಖ್ಯೆ | ನಗರ ಮತ್ತು ಇತರೆ ಸ್ಥಳಗಳ ಜನಸಂಖ್ಯೆ | ವರ್ಗೀಕರಣ |
|---|---|---|
| 1 | 16 ಲಕ್ಷ ಮತ್ತು ಅದಕ್ಕೂ ಹೆಚ್ಚು | ಎ |
| 2 | 8 ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ 16 ಲಕ್ಷ ಮೀರದಂತೆ | ಬಿ1 |
| 3 | 4 ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ 8 ಲಕ್ಷ ಮೀರದಂತೆ | ಬಿ2 |
| 4 | 50,000 ಮತ್ತು ಅದಕ್ಕೂ ಹೆಚ್ಚು ಆದರೆ 4 ಲಕ್ಷ ಮೀರದಂತೆ | ಸಿ |
| 5 | 25,000 ಮತ್ತು ಅದಕ್ಕೂ ಹೆಚ್ಚು ಆದರೆ 50,000 ಮೀರದಂತೆ | ಡಿ |
| 6 | ಇತರೆ ಸ್ಥಳಗಳು | ಇ |

**ದಿನಾಂಕ: 01–11–2010 ರಿಂದ ಮನೆಬಾಡಿಗೆ ಭತ್ಯೆ ದರಗಳು ಈ ಕೆಳಗಿನಂತಿವೆ:**

| ನಗರ ಪಟ್ಟಣಗಳ ವರ್ಗೀಕರಣ | ಪರಿಷ್ಕರಿಸಿದ ಮನೆಬಾಡಿಗೆ ಭತ್ಯೆ ದರ |
|---|---|
| ಎ | ಮೂಲ ವೇತನದ ಶೇಕಡ 25 ರಷ್ಟು |
| ಬಿ1<br>ಬಿ2 | ಮೂಲ ವೇತನದ ಶೇಕಡ 16 ರಷ್ಟು |
| ಸಿ | ಮೂಲ ವೇತನದ ಶೇಕಡ 10 ರಷ್ಟು |
| ಖ | ಮೂಲ ವೇತನದ ಶೇಕಡ 7 ರಷ್ಟು |
| ಇ | ಮೂಲ ವೇತನದ ಶೇಕಡ 6 ರಷ್ಟು |

**ನಗರ ಪರಿಹಾರ ಭತ್ಯೆ ರೂ ದರಗಳು ಈ ಕೆಳಗಿನಂತಿವೆ.**

| ವೇತನದ ಹಂತ (ಮೂಲ ವೇತನ) | ವರ್ಗೀಕರಣ ನಗರಗಳಲ್ಲಿ ನಗರ ಪರಿಹಾರ ಭತ್ಯೆ ಮೊತ್ತ (ತಿಂಗಳಿಗೆ ರೂ.) | | |
|---|---|---|---|
| | **ಎ** | **ಬಿ1** | **ಬಿ2** |
| ಮೂಲ ವೇತನ ತಿಂಗಳಿಗೆ ರೂ. 4800 ರಿಂದ 7799 | 150 | 100 | 80 |
| ಮೂಲ ವೇತನ ತಿಂಗಳಿಗೆ ರೂ. 7800 ಮತ್ತು ಅದಕ್ಕೂ ಹೆಚ್ಚು | 300 | 200 | 80 |